ಗಂಗೆಯಂತೆಯೇ ಗೀತೆಯೂ. ಅಲ್ಲಿ ನಾಸ್ತಿಕರೂ ಮೀಯುತ್ತಾರೆ. ಆಸ್ತಿಕರೂ ಮೀಯುತ್ತಾರೆ. ನಾಸ್ತಿಕರು ಮೈತೊಳೆಯುತ್ತಾರೆ. ಆಸ್ತಿಕರು ಮೈಮನಗಳೆರಡನ್ನೂ. ವಿಜಯನಾಥ ಭಟ್ಟರು ಆಸ್ತಿಕರು. ಬಹಳ ಸಮಯದಿಂದ ಗೀತೆಯಲ್ಲಿ ಮಿಂದವರು. ಗೀತೆಯ ಮಾತುಗಳು ಅವರ ಮನದೊಳಗೆ ಅನುಗಾಲ ಗುನುಗುಡುತ್ತಿದ್ದವು. ಕೊನೆಗೊಮ್ಮೆ ತಡೆಯಲಾರದೆ ಒಳಗೆ ತುಂಬಿದ್ದು ಹಾಡಾಗಿ ಹೊರಹೊಮ್ಮಿತ್ತು. ಇದೊಂದು ಅಂತಃಸ್ಫೋಟ!

ಹಿಂದಿನ ವಿದ್ವಾಂಸರು ಗೀತೆಯನ್ನು ಹಲವಾರು ಬಗೆಯಿಂದ ವಿವರಿಸಿದ್ದಾರೆ. ಆ ಎಲ್ಲ ವಿವರಣೆಗಳನ್ನು ಭಟ್ಟರು ಯಥೋಚಿತವಾಗಿ ಅಲ್ಲಿ ಇಲ್ಲಿ ಬಳಸಿಕೊಂಡಿದ್ದಾರೆ. ಎಷ್ಟೋ ಕಡೆ ನನ್ನ ಅಭಿಪ್ರಾಯ ಅವರ ಅಭಿಪ್ರಾಯಕ್ಕಿಂತ ಭಿನ್ನವಾಗಿರಬಹುದು. ಅದು ಮುಖ್ಯವಲ್ಲ. ಎಲ್ಲ ಅಭಿಪ್ರಾಯ ಭೇದದ ಜತೆಗೂ ನಾನು ಅವರ ವಿನೀತ ಪ್ರಾಮಾಣಿಕತೆಯನ್ನು ಮೆಚ್ಚಿಕೊಂಡಿದ್ದೇನೆ.

'ವಿಜಯ' ಎನ್ನುವುದು ಅರ್ಜುನನ ಹೆಸರೂ ಹೌದು. ಆ ವಿಜಯನಿಗೆ ವಿಜಯನಾಥ ಬರೆದ ಗೀತೆಯನ್ನು ಈ ವಿಜಯನಾಥ ಕಂಡ ಬಗೆ ಇದು. ಒಬ್ಬೊಬ್ಬರ ಕಾಣ್ಕೆ ಒಂದೊಂದು ತೆರ. ಎಲ್ಲರಿಗೂ ಒಂದೇ ತರ ಕಾಣಿಸಲಿಕ್ಕೆ ಗೀತೆಯೆಂದರೆ ದಿನಪತ್ರಿಕೆಯ ವರದಿಯಲ್ಲ.

ವಾಸ್ತವವಾಗಿ ಗೀತೆ ಇನ್ನೊಬ್ಬರಿಗೆ ಏನು ಅರ್ಥ ಕೊಟ್ಟಿದೆ ಎನ್ನುವುದು ಮುಖ್ಯವಲ್ಲ. ನಮ್ಮ ಬದುಕಿನ ಅನುಭವದ ಹಿನ್ನೆಲೆಯಲ್ಲಿ ನಮಗೇನು ಅರ್ಥವಾಯಿತು – ಅದು ಮುಖ್ಯ. ಅನುಭವ ಎಷ್ಟು ವಿಧವೋ ಅರ್ಥವೂ ಅಷ್ಟೇ ವಿಧ. ನಮ್ಮ ಗೀತೆಗೆ ನಮ್ಮ ಅರ್ಥ. ಆಗ ಓದು ಸಾರ್ಥಕ; ಬದುಕೂ ಸಾರ್ಥಕ.

ಗೆಳೆಯ ಭಟ್ಟರು ದುರ್ಗಮವಾದ ದಾರಿಯಲ್ಲಿ ಹೆಜ್ಜೆಯನ್ನಿಟ್ಟಿದ್ದಾರೆ: 'ದುರ್ಗಂ ಪಥಸ್ತತ್ ಕವಯೋ ವದಂತಿ.' ಹೆಜ್ಜೆ ಗುರಿ ಮುಟ್ಟಲಿ. ಗೀತಾಚಾರ್ಯನ ರಕ್ಷಾಕವಚ ಅವರಿಗಿರಲಿ.◆

– ಬನ್ನಂಜೆ ಗೋವಿಂದಾಚಾರ್ಯ

'ಸ್ವಾಮೀಜಿ ನನ್ನ ಪಾಲಿಗೆ ಒಂದು ಅದ್ಭುತ'

ಮಿಸೆಸ್ ಎಡಿತ್ ಆಲನ್, ಇಡಾ ಆನ್‌ಸೆಲ್‌ಗೆ ಬರೆದ ಕೆಲವು ಪತ್ರಗಳಲ್ಲಿ ಸ್ವಾಮೀಜಿಯವರಿಗೆ ಸಂಬಂಧಿಸಿದ ಕೆಲವು ವಿಚಾರಗಳಿವೆ. ಅವು ಇಂತಿವೆ: "ಸ್ವಾಮೀಜಿಯವರು ಸಾನ್‌ಫ್ರಾನ್ಸಿಸ್ಕೊದಿಂದ ಹೊರಡುವ ವಿಷಯವನ್ನು ತಿಳಿಸಿದಾಗ ನನಗೆ ಬಹಳ ನೋವಾಯಿತು. ಅವರು 'ನಾನು ನಿಮಗೆ ಇನ್ನೊಬ್ಬ ಸ್ವಾಮಿಯನ್ನು ಕಳುಹಿಸಿಕೊಡುತ್ತೇನೆ. ನಾನು ಮಾತನಾಡಿದುದನ್ನು ಅವರು ಬದುಕಿ ತೋರಿಸುತ್ತಾರೆ' ಎಂದರು. ಮೊದಲ ಬಾರಿ ನಾನು ಸ್ವಾಮಿ ತುರೀಯಾನಂದರನ್ನು ಕಂಡಾಗ ನನ್ನ ಮನಸ್ಸಿನಲ್ಲಿ ಉದಿಸಿದ ಭಾವನೆಗಳನ್ನು ಶಬ್ದಗಳಲ್ಲಿ ಹೇಳಲಾಗದು. ಅವರು ನನಗೆ ಪ್ರೇಮಮಯರಾಗಿ ಗೋಚರಿಸಿದರು. ಸ್ವಾಮೀಜಿಯವರು ಅವರ ಕುರಿತಾಗಿ ಹೇಳಿದುದನ್ನು ಹೇಳಿದಾಗ ಅವರು ಹೇಳಿದರು, 'ನಾನು ಒಂದು ಸಾಮಾನ್ಯ ತೆಪ್ಪ. ನಾನು ಒಬ್ಬಿಬ್ಬರನ್ನು ಆಚೆಯ ದಡಕ್ಕೆ ತಲುಪಿಸಬಹುದೇನೋ. ಆದರೆ ಸ್ವಾಮೀಜಿ ಅಟ್ಲಾಂಟಿಕ್ ಲೈನರ್, ಸಾವಿರಾರು ಜನರನ್ನು ಇನ್ನೊಂದು ದಡಕ್ಕೆ ತಲುಪಿಸುವವರು. ಇದನ್ನು ಎಂದಿಗೂ ಮರೆಯದಿರು. ಅವರೊಬ್ಬರೇ ನಿಜವಾದ ಅರ್ಥದಲ್ಲಿ ಸ್ವಾಮೀಜಿ.' "

ಎಡಿತ್ ಇನ್ನೊಂದು ಪತ್ರದಲ್ಲಿ ಬರೆಯುತ್ತಾಳೆ, "ಸ್ವಾಮೀಜಿ ಹೇಳಿದ್ದರು, ನೀರಿನಲ್ಲಿ ಒಂದು ಕಲ್ಲನ್ನು ಎಸೆದಾಗ ಒಂದು ವರ್ತುಲ ಏರ್ಪಡುತ್ತದೆ, ಕ್ರಮೇಣ ಚಿಕ್ಕ ಚಿಕ್ಕ ಕ್ಷೀಣ ಪ್ರಭಾವವುಳ್ಳ ವರ್ತುಲಗಳು ಏರ್ಪಡುತ್ತ ಹೋಗುತ್ತವೆ. ಅದೇ ರೀತಿ ಅವತಾರಪುರುಷ ಆಗಮಿಸಿದಾಗಲೂ ಆಗುತ್ತದೆ. ಅವನು ದೊಡ್ಡ ಕಲ್ಲು. ಅವನು ಆಗಮಿಸಿದಾಗ ಅವನ ಸುತ್ತ ಬಹಳಷ್ಟು ವರ್ತುಲಗಳು – ಒಂದಕ್ಕಿಂತ ಒಂದು ಕಿರಿದಾದ, ಆದರೆ ದೊಡ್ಡ ಪರಿಧಿ ಇರುವಂತಹ ವರ್ತುಲಗಳು ನಿರ್ಮಾಣವಾಗುತ್ತವೆ. ನಾವು ಅಂತಹ ಒಂದು ವರ್ತುಲದಲ್ಲಿದ್ದೇವೆ ಎಂಬುದೇ ನಮಗೆ ಆನಂದದ ಅನುಭವವನ್ನು ಕೊಡುತ್ತದೆ. ನಾನು ಸ್ವಾಮೀಜಿಯವರ ಕುರಿತು ಆಲೋಚಿಸಿದಷ್ಟೂ ಅವರು ಅದ್ಭುತರಾಗುತ್ತಾರೆ"

ಆಕೆ ಹೀಗೆ ಮುಂದುವರಿಸುತ್ತಾಳೆ: "ಸ್ವಾಮೀಜಿ ನನ್ನ ಪಾಲಿಗೆ ಒಂದು ಅದ್ಭುತ. ಅದ್ಭುತ ಎಂದು ಹೇಳಿದಾಗ ಗೌರವಾದರ, ಬೆರಗು ವಿಸ್ಮಯವನ್ನುಂಟುಮಾಡುವವರು ಎಂದರ್ಥ. ನಾವು ಜಗತ್ತಿನ ಅದ್ಭುತಗಳನ್ನು, ಅಂದರೆ ಈಜಿಪ್ತಿನ ಪಿರಮಿಡ್, ಬ್ಯಾಬಿಲೋನಿಯಾದ ತೂಗುವ ಉದ್ಯಾನಗಳು, ಅಲೆಕ್ಸಾಂಡ್ರಿಯಾದ ಲೈಟ್ ಹೌಸ್, ಚೈನಾದ ಗೋಡೆ, ಭಾರತದ ತಾಜ್‌ಮಹಲ್ ಮತ್ತು ರೋಮಿನ ರೋಮನ್ ಕೊಲೋಸಿಯಮ್ ವೀಕ್ಷಿಸಿದಾಗ ಬೆರಗಾಗುತ್ತೇವೆ. ಅದೇ ರೀತಿ ನಾನು ಪುಸ್ತಕಭಂಡಾರದಲ್ಲಿ The Life of Swami Vivekananda, The Complete Works of Swami Vivekananda, Reminiscences of Swami Vivekananda, Swami Vivekananda in the West - New Discoveries **ಇನ್ನೂ ಹತ್ತು–ಹಲವು ಗ್ರಂಥಗಳನ್ನು ನೋಡಿ ಸ್ವಾಮೀಜಿಯವರ ಮಹಾದ್ಭುತ ಜೀವನದರ್ಶನವನ್ನು ಭಾವಿಸುತ್ತ ಬೆರಗಾಗುತ್ತೇನೆ. ಮಾನವತೆಗೆ ಮುಂದಿನ ೧೫೦೦ ವರ್ಷಗಳಿಗಾಗುವಂತಹ ಆಸ್ತಿ ಅದು. ಇದು ಅದ್ಭುತವಲ್ಲವೆ? ಮುಂಬರಲಿರುವ ಜನಾಂಗಗಳೂ ಸ್ವಾಮೀಜಿಯವರ ಜೀವನ–ಸಂದೇಶಗಳ ಘನತೆಯನ್ನು ಕಂಡು ನಿಬ್ಬೆರಗಾಗಲಿವೆ, ಶಿರಬಾಗಿ ಅನುಸರಿಸಲಿವೆ..."**

(ಮೂಲ : ಸ್ವಾಮಿ ಚೇತನಾನಂದ ; ಸಂಗ್ರಹ ಮತ್ತು ಅನುವಾದ: ಮಾತಾ ತ್ಯಾಗಮಯೀ)



ದಶಮ ಸ್ಕಂಧ

ಭಾಗ–೧

ಶ್ರೀಕೃಷ್ಣನ ಜನನದ ಹಿನ್ನೆಲೆ

ದ್ವಾಪರಯುಗದಲ್ಲಿ ದಾನವರು ಭೂಲೋಕದಲ್ಲಿ ದೌರ್ಜನ್ಯ ನಡೆಸಲು ಬಹುತೇಕ ಕ್ಷತ್ರಿಯರಾಗಿ ಜನಿಸಿದರು. ಜನಸಾಮಾನ್ಯರನ್ನು ಧರ್ಮದ ಹಾದಿಯಿಂದ ದಿಕ್ಕು ತಪ್ಪಿಸಿದರು. ಮಂದಾಂಧರಾದ ಕ್ಷತ್ರಿಯರ ದುರಾಡಳಿತವನ್ನು ಸಹಿಸಲಾರದೆ ಭೂದೇವಿಯು ಗೋವಿನ ರೂಪ ತಾಳಿ, ಬ್ರಹ್ಮದೇವರಲ್ಲಿ ಮೊರೆಹೋದಳು. ಬ್ರಹ್ಮನು ಸಕಲ ದೇವತೆಗಳನ್ನು ಕರೆದುಕೊಂಡು ಕ್ಷೀರಸಮುದ್ರದ ದಂಡೆಗೆ ಬಂದನು. ಅಲ್ಲಿ ಶ್ರೀಮನ್ನಾರಾಯಣನನ್ನು ಪುರುಷ ಸೂಕ್ತದಿಂದ ಪ್ರಾರ್ಥಿಸಿದನು. ಸ್ವಲ್ಪ ಹೊತ್ತಿನಲ್ಲಿ ಬ್ರಹ್ಮನಿಗೆ ಅಶರೀರವಾಣಿ ಕೇಳಿಸಿತು. ಅದನ್ನು ಕೇಳಿಸಿಕೊಂಡ ಬ್ರಹ್ಮ ದೇವನು ಸಂತಸಗೊಂಡನು. ದೇವತೆಗಳನ್ನು ಕುರಿತು, "ನಿಮ್ಮ ಕೆಲಸವಾಯಿತು. ಇನ್ನು ಕೆಲವೇ ದಿನಗಳಲ್ಲಿ ದೇವರ ದೇವನಾದ ನಾರಾಯಣನು ವಸುದೇವನ ಮಗನಾಗಿ ಜನಿಸಿ ಬರುತ್ತಾನೆ. ಆದಿಶೇಷನು ಭಗವಂತನ ಅಣ್ಣನಾಗಿ ಜನಿಸುತ್ತಾನೆ. ಅವರ ಸೇವೆಗಾಗಿ ಯಾದವರ ಕುಲದಲ್ಲಿ ನೀವೆಲ್ಲರೂ ಜನಿಸಿರಿ, ದೇವತಾಸ್ತ್ರೀಯರೆಲ್ಲಾ ಗೋಪಿಕಾಸ್ತ್ರೀಯರಾಗಿ ಜನಿಸಿರಿ. ಋಷಿ ಸಾಧುಸಂತರೆಲ್ಲಾ ಗೋವುಗಳಾಗಿ ಜನಿಸಿ, ಭಗವಂತನಿಗೆ ಸೇವೆ ಮಾಡಿರಿ. ನೀವೆಲ್ಲಾ ಧೈರ್ಯದಿಂದಿದ್ದು, ನಿಮ್ಮೆಲ್ಲ ಕೆಲಸ ಕಾರ್ಯಗಳಲ್ಲಿ ಮುಂದುವರಿಯಿರಿ" ಎಂದನು.

ಮಥುರಾಪಟ್ಟಣವನ್ನು ಯಾದವರ ರಾಜ ಉಗ್ರಸೇನ ಮಹಾರಾಜನು ಆಳುತ್ತಿದ್ದನು. ಅವನಿಗೆ ಕಂಸ ಮತ್ತು ದೇವಕಿ ಎಂಬ ಮಕ್ಕಳಿದ್ದರು. ಉಗ್ರಸೇನ ಮಹಾರಾಜನು ದೇವಕಿಯನ್ನು ವಸುದೇವನಿಗೆ ಕೊಟ್ಟು ಮದುವೆ ಮಾಡಿದನು. ಮಗಳಿಗಾಗಿ ನೂರಾರು ಬಂಗಾರದ ರಥಗಳನ್ನೂ, ಹತ್ತು ಸಾವಿರ ಕುದುರೆಗಳನ್ನೂ, ಅವಳ ಸೇವೆಗಾಗಿ ಇನ್ನೂರು ದಾಸಿಯರನ್ನೂ ಕೊಟ್ಟನು. ದೇವಕಿಯ ಅಣ್ಣನಾದ ಕಂಸನಿಗೆ ತಂಗಿಯ ಮೇಲೆ ವಿಶೇಷವಾದ ಪ್ರೀತಿಯಿತ್ತು. ನವದಂಪತಿಗಳನ್ನು ಕಳುಹಿಸಿ ಬರಲು ತಾನೇ ಸಾರಥಿಯಾಗಿ ಮೆರವಣಿಗೆಯಲ್ಲಿ ಗಂಡನ ಮನೆಗೆ ಹೊರಟನು. ಇಂತಹ ಸಮಯದಲ್ಲಿ ಎಲ್ಲರಿಗೂ ಕೇಳಿಸುವಂತೆ ಆಕಾಶವಾಣಿಯಾಯಿತು: "ಎಲೈ ಕಂಸನೇ, ನಿನ್ನ ತಂಗಿಯ ಎಂಟನೇ ಗರ್ಭದಲ್ಲಿ ಜನಿಸುವ ಮಗುವು ನಿನ್ನನ್ನು ಸಂಹರಿಸುತ್ತದೆ, ಎಚ್ಚರ!!" ಕೂಡಲೇ ಕಂಸನು ತಾನು ನಡೆಸುತ್ತಿದ್ದ ರಥವನ್ನು ನಿಲ್ಲಿಸಿ, ತನ್ನ ತಂಗಿಯ ಕೇಶರಾಶಿಯನ್ನು ಹಿಡಿದು ಖಡ್ಗದಿಂದ ಆಕೆಯ ಶಿರಚ್ಛೇದನ ಮಾಡಲು ಮುಂದಾದನು. ದೇವಕಿಯ ಗಂಡನಾದ ವಸುದೇವನು ಕಂಸನನ್ನು ತಡೆದು, "ಕಂಸೇಂದ್ರಾ ! ನಿನಗೆ ಮರಣ ಎನ್ನುವುದು ಇವಳಿಂದ ಅಲ್ಲ. ಇವಳಿಂದ ಜನಿಸುವ ಮಕ್ಕಳಿಂದ ಅಲ್ಲವೇ? ಇವಳನ್ನು ಕೊಂದರೆ ನಿನಗೆ ಸ್ತ್ರೀಹತ್ಯಾ ದೋಷವು ಬರುತ್ತದೆ" ಎಂದನು. ಕಂಸನಿಗೂ ಅವನ ಮಾತು ಯೋಗ್ಯವೆನಿಸಿತು. ತಕ್ಷಣವೇ ತಂಗಿಯನ್ನು ಬಿಟ್ಟನು. ದೇವಕಿಯ ಉದರದಲ್ಲಿ ಜನಿಸಿದ ಮಗುವನ್ನು ತನಗೆ ತಂದೊಪ್ಪಿಸಬೇಕೆಂದು ಕಟ್ಟಪ್ಪಣೆ ಮಾಡಿದನು. ವಸುದೇವನು 'ಹಾಗೆಯೇ ಆಗಲಿ' ಎಂದು ವಚನವನ್ನಿತ್ತನು.

ಕಾಲ ಕಳೆದಂತೆ ದೇವಕಿಯು ಗರ್ಭ ಧರಿಸಿದಳು. ಆಕೆ ಹಡೆದ ಮೊದಲ ಮಗುವನ್ನು ವಸುದೇವನು ಕಂಸನಿಗೆ ಒಪ್ಪಿಸಿದನು. ಕಂಸನಿಗೆ ಪರಮ ಸಂತೋಷವಾಯಿತು. ಅವನು

ವಸುದೇವನಿಗೆ, 'ಎಂಟನೇ ಮಗುವಿನಿಂದ ಮರಣವಿರುವುದರಿಂದ, ಇದನ್ನು ನೀನೇ ತೆಗೆದುಕೊಂಡು ಹಿಂತಿರುಗು' ಎಂದನು. ಒಮ್ಮೆ ನಾರದರು ಕಂಸನಲ್ಲಿಗೆ ಬಂದರು. ಅವರಿಂದ ಕಂಸನು ತನ್ನ ಹಿಂದಿನ ಜನ್ಮದಲ್ಲಿ ತಾನು ದೈತ್ಯನಾಗಿ ಜನಿಸಿದ್ದನೆಂಬುದನ್ನು ತಿಳಿದನು. ಯಾದವರು ಮತ್ತು ಯಾದವರ ಸ್ತ್ರೀಯರೇ ದೇವದೇವತೆಯರು ಎಂಬುದನ್ನು ಸಹ ತಿಳಿದನು. ದೇವಕಿಯ ಎಂಟನೇ ಮಗ ನಿನ್ನನ್ನು ಸಂಹರಿಸುವನು; ಯಾದವರೆಲ್ಲರೂ ಆತನಿಗೆ ಸಹಕರಿಸುವರು ಎಂಬ ವಿಷಯವನ್ನು ತಿಳಿದ ಕಂಸನು ಮೊದಲು ದೇವಕಿಗೆ ಹುಟ್ಟಿದ್ದ ಎಲ್ಲ ಮಕ್ಕಳನ್ನೂ ಕೊಂದನು. ವಸುದೇವ ದೇವಕಿಯರಿಗೆ ಸಂಕೋಲೆ ತೊಡಿಸಿ ಕಾರಾಗೃಹದಲ್ಲಿಟ್ಟನು. ತಂದೆಯಾದ ಉಗ್ರಸೇನನನ್ನು ನಿಗ್ರಹಿಸಿ ರಾಜ್ಯದ ಎಲ್ಲ ಅಧಿಕಾರಸೂತ್ರಗಳನ್ನೂ ತಾನೇ ವಹಿಸಿಕೊಂಡನು. ತಾನೇ ರಾಜನೆಂದೂ ಸಾರಿಬಿಟ್ಟನು.

ಕಂಸನ ಉಪಟಳ ತಡೆಯಲಾರದೆ ಯಾದವರು ರಾಜ್ಯ ಬಿಟ್ಟು ಹೊರಟರು. ಮತ್ತೆ ಹಲವರು ಅವನಿಗೆ ಅಡಿಯಾಳಾಗಿ ಗುಲಾಮರಂತೆ ಬಾಳತೊಡಗಿದರು. ಕಂಸನು ದೇವಕಿಗೆ ಜನಿಸಲಿರುವ ಮಗನಿಂದ ಎದುರಿಸಬೇಕಾದ ಆಪತ್ತನ್ನು ತಡೆಯಲು ತನ್ನ ಪರಿವಾರದ ಸಂಘಟನೆ ಮಾಡಿಕೊಂಡನು. ಪ್ರಲಂಬ, ಚಾಣೂರ, ತೃಣಾವರ್ತ, ಮುಷ್ಟಿಕ, ಅರಿಷ್ಟ, ದ್ವಿವಿಧ, ಕೇಶಿ, ಬಾಣಾಸುರ, ನರಕಾಸುರ ಮತ್ತು ಪೂತನಿ ಮೊದಲಾದ ದೈತ್ಯ ಬಲಶಾಲಿಗಳ ಪಡೆಯನ್ನೇ ಕಂಸನು ಇಟ್ಟುಕೊಂಡನು.

ಇತ್ತ ದೇವಕಿಯು ಏಳನೇ ಗರ್ಭ ಧರಿಸಿದಳು. ಆ ಗರ್ಭದಲ್ಲಿ ಆದಿಶೇಷನು ಜನಿಸುವವನಾದ್ದರಿಂದ ಆತನ ರಕ್ಷಣೆಗಾಗಿ ಶ್ರೀಹರಿಯು ಯೋಗಮಾಯೆಯನ್ನು ಕರೆದು, "ಎಲೈ ಸಾಧ್ವಿಯೇ, ದೇವಕಿಯ ಗರ್ಭದಲ್ಲಿರುವ ಪಿಂಡವು ಆದಿಶೇಷನ ಅಂಶದಿಂದ ಕೂಡಿದೆ. ಅದರ ರಕ್ಷಣೆಗಾಗಿ ಅದನ್ನು ನಂದಗೋಕುಲದಲ್ಲಿರುವ ನಂದಗೋಪನ ಮನೆಯಲ್ಲಿ, ಕಂಸನಿಗೆ ಹೆದರಿ ಗುಪ್ತವಾಗಿ ವಾಸಿಸುತ್ತಿರುವ ವಸುದೇವನ ಪತ್ನಿ ರೋಹಿಣಿಯ ಗರ್ಭದಲ್ಲಿ ಇರಿಸು. ನಾನು ಎಂಟನೆಯ ಮಗುವಾಗಿ ದೇವಕಿಯ ಗರ್ಭವನ್ನು ಸೇರಿದಾಗ ನೀನು ಸಹ ನಂದಗೋಪನ ಮನೆಯಲ್ಲಿ ಹೆಂಡತಿಯಾದ ಯಶೋದೆಯ ಗರ್ಭವನ್ನು ಸೇರಿ ಸೂಕ್ತವಾದ ಕಾಲದಲ್ಲಿ ಜನಿಸು" ಎಂದನು. ಯೋಗಮಾಯೆಯು, "ಹಾಗೆಯೇ ಆಗಲಿ" ಎಂದು ಶ್ರೀಹರಿಗೆ ನಮಸ್ಕರಿಸಿ, ಆತನು ಹೇಳಿದಂತೆ ಕಾರ್ಯ ನಿರ್ವಹಿಸಿದಳು. ಆ ಯೋಗಮಾಯೆಯೇ ಮುಂದೆ ದುರ್ಗಾ, ಕಾಳಿ, ಭದ್ರಕಾಳಿ, ವಿಜಯೆ, ವೈಷ್ಣವಿ, ಕುಮುದೆ, ಚಂಡಿ, ಕೃಷ್ಣೆ, ಮಾಧವಿ, ಮಾಯೆ, ನಾರಾಯಣಿ, ಈಶಾನಿ, ಶಾರದೆ, ಅಂಬಿಕೆ ಎಂಬ ಹಲವು ನಾಮಗಳಿಂದ ಖ್ಯಾತಳಾಗಿ ಭಕ್ತಾದಿಗಳಿಂದ ಪೂಜಿಸಲ್ಪಡುತ್ತಾಳೆ.

ಯೋಗಮಾಯೆಯ ಕಾರ್ಯದಿಂದ ದೇವಕಿಯ ಏಳನೇ ಗರ್ಭವು ನಿಲ್ಲದೆ ಗರ್ಭಸ್ರಾವವಾಯಿತೆಂದು ಮಥುರಾ ಪಟ್ಟಣದ ಹಿರಿಯರೆಲ್ಲಾ ಹೇಳಿದರು. ಇದನ್ನು ಕಂಸನು ನಂಬಿದನು. ದೇವಕಿಯು ಮತ್ತೊಮ್ಮೆ ಗರ್ಭ ಧರಿಸಿದಳು. ಇದು ಎಂಟನೆಯ ಗರ್ಭವಾಗಿತ್ತು. ಶ್ರೀಹರಿಯು ಯುಕ್ತಕಾಲದಲ್ಲಿ ವಸುದೇವನ ಹೆಂಡತಿಯಾದ ದೇವಕಿಯ ಗರ್ಭವನ್ನು ಪ್ರವೇಶಿದನು. ಆಗ ದೇವಕಿಯ ಮೊಗವು ತೇಜಸ್ಸಿನಿಂದ ಕೂಡಿತ್ತು. ಆ ತೇಜಸ್ಸಿಗೆ ಮನೆಯೇ ಬೆಳಕಾಗುತ್ತಿತ್ತು. ಅವಳ ದೇಹಕಾಂತಿಯನ್ನು ಕಂಡು ಕಂಸನು ಬೆದರಿದನು. ದೇವತೆಗಳು ದೇವಕಿ ಇರುವ ಕಾರಾಗೃಹಕ್ಕೆ ಬಂದು, ವಿಷ್ಣುವನ್ನು ಸ್ತುತಿಸಿ ಹೋದರು.

ದೇವಕಿಗೆ ನವಮಾಸಗಳು ತುಂಬಿದವು. ಮಧ್ಯರಾತ್ರಿಯ ಆ ಶುಭಮುಹೂರ್ತದ ರೋಹಿಣೀ ನಕ್ಷತ್ರದಲ್ಲಿ, ಸಕಲ ಗ್ರಹಗಳು ಉಚ್ಚಸ್ಥಿತಿಯಲ್ಲಿರುವಾಗ ಶ್ರೀಹರಿಯು ದೇವಕಿ ಗರ್ಭದಿಂದ ಮಗುವಾಗಿ ಹೊರಬಂದು, ತಕ್ಷಣ ತನ್ನ ನಿಜರೂಪವನ್ನು ತೋರಿಸಿದನು. ಆಕಾಶದಲ್ಲಿ ದೇವದುಂದುಭಿಗಳು ಮೊಳಗಿದವು. ಗಂಧರ್ವರು, ಕಿನ್ನರರು ಗಾನ ಮಾಡಿದರು. ದೇವತೆಗಳು, ಋಷಿಗಳು ಪುಷ್ಪವೃಷ್ಟಿಯನ್ನು ಕರೆದರು. ಚತುರ್ಭುಜಗಳಲ್ಲಿ ಶಂಕ, ಚಕ್ರ, ಗದಾಧಾರಿಯಾಗಿ, ಶ್ರೀವತ್ಸಾಂಕಿತ ಪೀತಾಂಬರ ಧಾರಿಯಾಗಿ ಪ್ರತ್ಯಕ್ಷನಾದ ದೇವನನ್ನು ಕಂಡು ವಸುದೇವ, ದೇವಕಿಯರು ಭಕ್ತಿಪೂರ್ವಕವಾಗಿ ನಮಸ್ಕರಿಸಿದರು.ವಸುದೇವನು ತಾನು ಸೆರೆಮನೆಯಲ್ಲಿರುವುದರಿಂದ ಜನನಕಾಲಕ್ಕೆ ಮಾಡಬೇಕಾದ ಗೋವುಗಳ ದಾನವನ್ನು ಮುಂದೆ ಬಿಡುಗಡೆಯಾದಾಗ ಮಾಡುವುದಾಗಿ ಮನದಲ್ಲೇ ಸಂಕಲ್ಪಿಸಿದನು.

ಭಕ್ತಿಯಿಂದ ನಮಸ್ಕರಿಸಿದ ವಸುದೇವನನ್ನು ಕುರಿತು ಶ್ರೀಹರಿಯು, "ನಾನು ಇನ್ನು ಮುಂದೆ ಸಾಮಾನ್ಯ ಮಾನವ ಶಿಶುವಾಗುತ್ತೇನೆ. ನನ್ನನ್ನು ಈಗಲೇ ನಂದಗೋಕುಲಕ್ಕೆ ಕರೆದೊಯ್ಯಿರಿ. ಅಲ್ಲಿ ನಂದಗೋಪನ ಪತ್ನಿಯಾದ ಯಶೋದೆಯು ಹೆಣ್ಣು ಮಗುವನ್ನು ಹಡೆದಿದ್ದಾಳೆ. ನನ್ನನ್ನು ಯಶೋದೆಯ ಮಡಿಲಲ್ಲೂ, ಆ ಹೆಣ್ಣು ಮಗುವನ್ನು ಇಲ್ಲಿಗೆ ಕರೆತಂದು ದೇವಕಿಯ ಪಕ್ಕದಲ್ಲೂ ಮಲಗಿಸು" ಎಂದು ಹೇಳಿದನು. ಇದರ ಜೊತೆಗೆ, "ಹಿಂದಿನ ಜನ್ಮದಲ್ಲಿ ಅಂದರೆ ಸ್ವಾಯಂಭುವ ಮನ್ವಂತರದಲ್ಲಿ ನೀವು ಸುತಪಾ ಮತ್ತು ಪೃಶ್ನಿ ಎಂಬ ದಂಪತಿಗಳಾಗಿದ್ದು, ಬ್ರಹ್ಮದೇವರ ಆಜ್ಞೆಯಂತೆ ಭಗವಂತನನ್ನು ಮಗುವಾಗಿ ಪಡೆಯಬೇಕೆಂದು ತಪಸ್ಸು ಮಾಡಿದ್ದಿರಿ. ಆಗ ನಾನು ಗರ್ಭ ಎಂಬ ಹೆಸರಿನಿಂದ ನಿಮಗೆ ಮಗುವಾಗಿ ಜನಿಸಿದ್ದೆನು. ನಂತರ ನೀವಿಬ್ಬರೂ ಎರಡನೇ ಜನ್ಮ ತಾಳಿ ಕಶ್ಯಪ ಮತ್ತು ಅದಿತಿಯರಾದಿರಿ. ಆಗ ನಾನು ಮತ್ತೆ ನಿಮ್ಮ ಮಗನಾಗಿ ಜನಿಸಿ, ವಾಮನಾವತಾರ ತಾಳಿದ್ದೆನು. ಈ ಜನ್ಮದಲ್ಲೂ ನಿಮಗೆ ಮಗನಾಗಿ ಜನಿಸಿ ಬಂದಿದ್ದೇನೆ. ಈ ವಿಷಯವನ್ನು ನಿಮಗೆ ತಿಳಿಸಲು ನನ್ನ ನಿಜರೂಪವನ್ನು ತೋರಿಸಿದೆನು. ಇನ್ನು ಮುಂದೆ ನಾನು ಹೇಳಿದಂತೆ ಕಾರ್ಯ ಪ್ರವೃತ್ತರಾಗಿ" ಎಂದು ಹೇಳಿ ಶ್ರೀಹರಿಯು ಸಾಮಾನ್ಯ ಮಗುವಾದನು.

ನಾರಾಯಣನ ಆಜ್ಞೆಯಂತೆ ವಸುದೇವನು ಮಗುವನ್ನು ಬುಟ್ಟಿಯಲ್ಲಿ ತೆಗೆದುಕೊಂಡು ಹೊರಗಡೆ ನೋಡಿದನು, ಕಾವಲುಗಾರರು ನಿದ್ರೆಯ ಮೋಡಿಯಲ್ಲಿದ್ದರು. ಇದ್ದಕ್ಕಿದ್ದಂತೆ ಕಾರಾಗೃಹದಲ್ಲಿ ಬೆಳಕು ಪಸರಿಸಿತು. ಸೆರೆಮನೆಯ ಬಾಗಿಲಿನ ಸರಪಣಿಗಳು ಕಳಚಿ ಬಿದ್ದವು. ಬೀಗವು ಮುರಿದು ಬಿದ್ದಿತು. ತೆರೆದ ಬಾಗಿಲಿನಿಂದ ವಸುದೇವನು ಮಗುವಿದ್ದ ಬುಟ್ಟಿಯನ್ನು ತಲೆಯ ಮೇಲೆ ಇಟ್ಟುಕೊಂಡು ಹೊರಬಂದನು. ಹೊರಗಡೆ ಧಾರಾಕಾರ ಮಳೆ ಸುರಿಯುತ್ತಿತ್ತು. ಆದಿಶೇಷನು ತನ್ನ ಹೆಡೆಯನ್ನು ತೆರೆದು ಮಗುವಿಗೆ ಮಳೆ, ಗಾಳಿ ಬೀಳದಂತೆ ತಡೆದನು. ಗೋಕುಲಕ್ಕೆ ತೆರಳುವಾಗ ತುಂಬಿ ಹರಿಯುತ್ತಿದ್ದ ಯಮುನೆಯು ವಸುದೇವನಿಗೆ ತೊಂದರೆಯಾಗದಂತೆ ದಾರಿ ಬಿಟ್ಟಳು. ವಸುದೇವನು ನಿರಾಯಾಸನಾಗಿ ನಂದಗೋಕುಲಕ್ಕೆ ಬಂದನು. ಅಲ್ಲಿಯೂ ಎಲ್ಲರೂ ಗಾಢನಿದ್ರೆಯಲ್ಲಿದ್ದರು. ವಸುದೇವನು ನೇರವಾಗಿ ಒಳಹೋಗಿ ಯಶೋದೆಯ ಪಕ್ಕದಲ್ಲಿ ಮಲಗಿದ್ದ ಹೆಣ್ಣುಮಗುವನ್ನು ತೆಗೆದುಕೊಂಡು, ತನ್ನ ಮಗುವನ್ನು ಆಕೆಯ ಪಕ್ಕದಲ್ಲಿಟ್ಟನು. ನಂತರ ಸರಸರನೆ ಕಾರಾಗೃಹಕ್ಕೆ ಹಿಂತಿರುಗಿ ಬಂದನು. ಮರಳಿ ಬರುವಾಗ ಮೊದಲಿನಂತೆ ಕಾರಾಗೃಹದ ಬಾಗಿಲುಗಳು ಮುಚ್ಚಿಕೊಂಡವು. ಸರಪಣಿಗಳು ಬಿಗಿದುಕೊಂಡವು; ಬೀಗವೂ ಹಾಕಲ್ಪಟ್ಟಿತು. ಆಗ ಮಗು ಅಳತೊಡಗಿ ಕಾವಲುಭಟರಿಗೆ ಎಚ್ಚರವಾಯಿತು. ಅವರು ಕಂಸನಿಗೆ ಸುದ್ದಿಯನ್ನು ತಿಳಿಸಿದರು.

ಸುದ್ದಿ ತಿಳಿದ ಕಂಸನು ಮೈಮೇಲಿನ ವಸ್ತ್ರದ ಪರಿವೆಯಿಲ್ಲದೆ ಖಡ್ಗಧಾರಿಯಾಗಿ ಸೆರೆಮನೆಗೆ ಬಂದನು. ದೇವಕಿಯ ಪಕ್ಕದಲ್ಲಿದ್ದ ಹೆಣ್ಣುಮಗುವನ್ನು ಕೈಯಲ್ಲಿ ಹಿಡಿದು ನೆಲಕ್ಕೆ ಅಪ್ಪಳಿಸಬೇಕು ಎನ್ನುವಷ್ಟರಲ್ಲಿ ಅದು ಕಂಸನ ಕೈಯಿಂದ ಜಾರಿಕೊಂಡು ಆಕಾಶಕ್ಕೆ ನೆಗೆಯಿತು. ಆ ಮಗುವೇ ಯೋಗಮಾಯೆಯಾಗಿದ್ದಳು. ಆಕೆ ತನ್ನ ನಿಜರೂಪದಿಂದ ಕಾಣಿಸಿಕೊಂಡು, "ಎಲೈ ಮೂರ್ಖ ಕಂಸನೇ! ನಿನ್ನನ್ನು ಸಂಹರಿಸುವ ಮಗುವು ಈಗಾಗಲೇ ಜನಿಸಿದೆ. ಇನ್ನಾದರೂ ಸಾತ್ವಿಕನಾಗಿ ಬಾಳು!" ಎಂದು ಹೇಳಿ ಅದೃಶ್ಯಳಾದಳು. ಇಂದಿಗೂ ಆಕೆ ಹಲವೆಡೆ ಭಕ್ತಜನರಿಂದ ವಿವಿಧ ರೂಪಗಳಲ್ಲಿ ದುರ್ಗಾಮಾತೆಯಾಗಿ ಪೂಜಿಸಲ್ಪಡುತ್ತಿದ್ದಾಳೆ.

ಯೋಗಮಾಯೆಯ ನುಡಿಗಳನ್ನು ಕೇಳಿದ ಕಂಸನು ಬೆದರಿದನು. ಇಲ್ಲಿಯತನಕ ತಾನು ಮಾಡಿದ ಶಿಶುಹತ್ಯೆಗಳೆಲ್ಲ ನಿರರ್ಥಕವಾದವೆಂದು ಅವನು ಭಾವಿಸಿದನು. ದೇವಕಿ, ವಸುದೇವರನ್ನು ಸೆರೆಮನೆಯಿಂದ ಬಿಡಿಸಿದನು. ಅವರಿಬ್ಬರನ್ನು ಬೇರೆ ಬೇರೆ ಅರಮನೆಗಳಲ್ಲಿ ಇರಿಸಿದನು. ಕೂಡಲೇ ರಾಜಸಭೆಯನ್ನು ಕರೆದು, ನಡೆದ ವಿಷಯವನ್ನು ತಿಳಿಸಿದನು. ಅವನ ಆಸ್ಥಾನಮಂತ್ರಿಯಾದ ದುರ್ಬೋಧ ಶಿಖಾಮಣಿಯು, "ಮಹಾರಾಜ, ಈ ಎರಡು ಮೂರು ದಿವಸ ಅಥವಾ ಹತ್ತು–ಹನ್ನೆರಡು ದಿನಗಳಲ್ಲಿ ರಾಜ್ಯದ ಎಲ್ಲ ಊರುಗಳಲ್ಲಿ ಜನಿಸಿದ ಮಕ್ಕಳನ್ನು ಸಂಹರಿಸಲು ಆಜ್ಞೆ ಮಾಡು. ಆಗ ನಿನಗೆ ಯಾರ ಭಯವೂ ಇರುವುದಿಲ್ಲ. ವಿಷ್ಣುವಿನ ಹೊರತು ಬೇರೆ ದೇವತೆಗಳು ನಿನ್ನನ್ನು ಕಂಡು ಹೆದರಿದ್ದಾರೆ. ಶ್ರೀಹರಿಯು ಗೋಬ್ರಾಹ್ಮಣ ಪ್ರತೀಕನಾಗಿದ್ದಾನೆ. ಆದ್ದರಿಂದ ಬ್ರಾಹ್ಮಣರು, ಋಷಿಮುನಿಗಳು, ಗೋವುಗಳು ಮತ್ತು ಅವರು ನಡೆಸುವ ಯಜ್ಞಯಾಗಾದಿಗಳನ್ನು ಧ್ವಂಸಗೊಳಿಸು" ಎಂದು ಸಲಹೆಕೊಟ್ಟನು. ಈ ಸಲಹೆಯು ಕಂಸನಿಗೆ ಪ್ರಿಯವೆನಿಸಿತು. ಅವನು ಅವರ ಈ ಸಲಹೆಯನ್ನೇ ಶಾಸನ ಮಾಡಿದನು. ಇದಕ್ಕೆ ದಕ್ಷರಾದ ಯೋಗ್ಯ ಸೈನಿಕ ಪಡೆಯನ್ನೇ ಮೀಸಲಿಟ್ಟನು.

ಶ್ರೀಕೃಷ್ಣನ ಬಾಲ್ಯ

ಹೆರಿಗೆಯ ಆಯಾಸದಿಂದಾಗಿ ತನಗೆ ಜನಿಸಿದ್ದ ಮಗುವು ಗಂಡೋ ಅಥವಾ ಹೆಣ್ಣೋ ಎಂಬುದನ್ನು ಯಶೋದೆಯು ಅರಿತಿರಲಿಲ್ಲ. ಅವಳು ಆಯಾಸ, ಬಳಲಿಕೆಗಳಿಂದಾಗಿ ನಿದ್ರೆಯ ಮಡಿಲಿಗೆ ಜಾರಿದಳು. ಮರುದಿನ ತನ್ನ ಮಡಿಲಲ್ಲಿ ದಿವ್ಯಲಕ್ಷಣಯುತವಾದ ಗಂಡುಮಗುವನ್ನು ಕಂಡು ಸಂತಸ ಗೊಂಡಳು. ಮಗುವನ್ನು ಕಂಡ ನಂದಗೋಪನು, ಸುದ್ದಿಯನ್ನು ನಂದಗೋಕುಲದ ದಶದಿಕ್ಕುಗಳಿಗೂ ತಲುಪಿಸಿದನು. ಗೋಕುಲದ ಸ್ತ್ರೀಪುರುಷರೆಲ್ಲರೂ ನಂದಗೋಪನ ಮನೆಯಲ್ಲಿ ನೆರೆದರು. ಮಗುವು ಜನಿಸಿದ ಕಾಲಕ್ಕೆ ನಡೆಯಬೇಕಾದ ಧಾರ್ಮಿಕ ಆಚರಣೆಗಳು– ಬ್ರಾಹ್ಮಣರಿಗೆ, ಬಡಬಗ್ಗರಿಗೆ ಗೋದಾನ, ಭೂದಾನ, ವಸ್ತ್ರದಾನ, ಸುವರ್ಣದಾನ ಇನ್ನಿತರ ಕಾರ್ಯಗಳು– ಯಶಸ್ವಿಯಾಗಿ ನಡೆದವು. ಗಾಯಕರು ಗಾನ ಮಾಡಿದರು, ನಗಾರಿ ದುಂದುಭಿ ಮೊದಲಾದ ಮಂಗಳ ವಾದ್ಯಗಳು ಮೊಳಗಿದವು. ಒಟ್ಟಿನಲ್ಲಿ ಇಡೀ ನಂದಗೋಕುಲದ ಪ್ರತಿ ಗೃಹದಲ್ಲಿಯೂ ಹಬ್ಬದ ವಾತಾವರಣ ಉಂಟಾಯಿತು.

ಕಂಸನ ಮಾಂಡಲಿಕನಾದ ನಂದಗೋಪನು ಮಹಾರಾಜನಿಗೆ ಸಲ್ಲಿಸಬೇಕಾದ ಕಪ್ಪಕಾಣಿಕೆಗಳನ್ನು ತೆಗೆದುಕೊಂಡು ಆಸ್ಥಾನಕ್ಕೆ ಬಂದನು. ಹಾಗೆಯೇ ಅವನು ವಸುದೇವನನ್ನು ಕಂಡನು. ವಸುದೇವನು ನಂದಗೋಪನಿಗೆ, 'ಮುಪ್ಪಿನ ಕಾಲದಲ್ಲಿ ನಿನಗೆ ಹುಟ್ಟಿದ ಮಗ, ಹಾಗೂ ನನ್ನ ಹೆಂಡತಿ ರೋಹಿಣಿ ಹೆತ್ತ ಮಗ ಇಬ್ಬರೂ ಕ್ಷೇಮದಿಂದಿರುವರೆ?' ಎಂದು ವಿಚಾರಿಸಿದನು. ಆ ಮಕ್ಕಳಿಬ್ಬರೂ ಕ್ಷೇಮದಿಂದಿರುವರು ಎಂಬ ವಿಷಯವನ್ನು ನಂದಗೋಪನು ತಿಳಿಸಿದನು. ತಾನು ಇಲ್ಲದಾಗ ನಂದಗೋಕುಲದಲ್ಲಿ ತೊಂದರೆಯಾದೀತೆಂದು ಹೆದರಿದ ನಂದಗೋಪನು ವಸುದೇವನ ಅಪ್ಪಣೆ ಪಡೆದು ಕೂಡಲೇ ಗೋಕುಲಕ್ಕೆ ಹಿಂತಿರುಗಿದನು.

ತನ್ನ ರಾಜ್ಯದ ಎಲ್ಲ ಮಕ್ಕಳನ್ನೂ ಕಂಸನು ಕೊಂದನು. ಕೆಲವು ದಿವಸಗಳ ಹಿಂದೆ ನಂದಗೋಕುಲದಲ್ಲಿ ಒಂದು ಗಂಡು ಶಿಶುವು ಜನಿಸಿತ್ತೆಂಬ ವಿಷಯ ಅವನಿಗೆ ತಿಳಿದುಬಂತು. ಆದರೆ ಅಲ್ಲಿಗೆ ಸೈನಿಕರನ್ನು ಕಳುಹಿಸದೆ, ಶಕ್ತಿಗಿಂತ ಯುಕ್ತಿಯಿಂದಲೇ ಕೆಲಸವನ್ನು ಸಾಧಿಸಬೇಕೆಂದು, ವಿಷಪೂರಿತ